ದಿಃ 30-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು ಶ್ರೀ.ಹೆಚ್.ವಿ.ವಿ ಪ್ರತಿವಾದಿ ಪರ ವಕೀಲರಿಂದಃ</u>

(ಈ ಹಂತದಲ್ಲಿ ಸಾಕ್ಷಿಗೆ ಕನ್ನಡ ಭಾಷೆ ಮಾತನಾಡಲು ಬರುವುದಿಲ್ಲದ ಕಾರಣ ಶ್ರೀ ಜಿ.ಎಂ.ಎನ್ ವಕೀಲರನ್ನು ನ್ಯಾಯಾಲಯದ ಪರ ಅನುವಾದಕರಾಗಿ ನೇಮಿಸಲಾಯಿತು).

ವೆಂಕಟನಬೋವಿರವರ ವಾರಸುದಾರರು ಎಂದು ನಾವು ಈ ದಾವೆಯನ್ನು ಹೂಡಿರುತ್ತೇವೆ. ನಾವು ವೆಂಕಟನಬೋವಿ ರವರ ವಾರಸುದಾರರು ಎಂದು ತೋರಿಸಲು ನಮ್ಮ ಕುಟುಂಬದ ವಂಶವೃಕ್ಷವನ್ನು ಹಾಜರುಪಡಿಸಿದ್ದೇವೆ. ವೆಂಕಟನಬೋವಿ ರವರು ಈಗ ತೀರಿಕೊಂಡಿದ್ದಾರೆ. ಸದರಿ ವೆಂಕಟನಬೋವಿಯವರು 50 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಸದರಿ ವೆಂಕಟನಬೋವಿ ರವರಿಗೆ 6 ಜನ ಮಕ್ಕಳಿರುತ್ತಾರೆ. ಸದರಿ ಮಕ್ಕಳ ಹೆಸರು ವೆಂಕಟಸ್ವಾಮಿ, ಗಂಗಾಧರಪ್ಪ, ಅಶ್ವತ್ಥಪ್ಪ, ವೆಂಕಟೇಶ್, ಗಂಗಮ್ಮ ಹಾಗೂ ಚಿನ್ನಗಂಗಮ್ಮ. ಸದರಿ 6 ಜನರ ಪೈಕಿ ವೆಂಕಟಸ್ವಾಮಿ, ಗಂಗಾಧರಪ್ಪ, ಅಶ್ವತ್ಥಪ್ಪ ಮತ್ತು ವೆಂಕಟೇಶ್ ರವರು ತೀರಿಕೊಂಡಿದ್ದಾರೆ. ಸದರಿ 6 ಜನರ ಪೈಕಿ ಬದುಕಿರುವ ಗಂಗಮ್ಮ ಹಾಗೂ ಚಿನ್ನಗಂಗಮ್ಮ ರವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅವರಿಬ್ಬರು ಹೆಣ್ಣುಮಕ್ಕಳಾಗಿದ್ದು ಅವರವರ ಗಂಡನ ಮನೆಯಲ್ಲಿ ವಾಸವಿರುವ ಕಾರಣ ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದು ನುಡಿಯುತ್ತಾರೆ. ವೆಂಕಟಸ್ವಾಮಿ, ಗಂಗಾಧರಪ್ಪ, ಅಶ್ವತ್ಥಪ್ಪ ಮತ್ತು ವೆಂಕಟೇಶ್ ರವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ದಾವಾ ಆಸ್ತಿಯನ್ನು ನಮಗೆ ಮತ್ತು ವೆಂಕಟೇಶ್ ರವರಿಗೆ ಮಾತ್ರ ನೀಡಿದ ಕಾರಣ ಸದರಿ 4 ಜನರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯ ಪ್ರತಿವಾದಿಗೆ ವೆಂಕಟನಬೋವಿ ರವರ 6 ಜನ ಮಕ್ಕಳೊಂದಿಗೆ ಯಾವುದೇ ಸಂಬಂಧ ಇರುವುದಿಲ್ಲ. ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದರು ಹಾಗೂ ನನ್ನ ತಂದೆಯವರು ತೀರಿಕೊಂಡ ನಂತರ ದಾವಾ ಆಸ್ತಿಯು ತನ್ನದೆಂದು ಪ್ರತಿವಾದಿಯು ತಹಶೀಲ್ದಾರ್ ರವರ ಕಛೇರಿಯಲ್ಲಿ ಪ್ರಕರಣವನ್ನು ದಾಖಲಿಸಿರುವ ಕಾರಣ ಪ್ರತಿವಾದಿಯ ವಿರುದ್ಧ ಈ ದಾವೆಯನ್ನು ಹೂಡಿದ್ದೇವೆ.

ವೆಂಕಟನಬೋವಿ ರವರಿಗೆ ಒಟ್ಟು ಎಷ್ಟು ಜಮೀನುಗಳಿದ್ದವು ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಂದೆಯವರ ಪಾಲಿಗೆ ಬಂದ ದಾವಾ ಆಸ್ತಿಯನ್ನು ಹೊರತುಪಡಿಸಿ ಇತರೆ ಜಮೀನುಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಈಗಲೂ ನಮ್ಮ ತಾತನಾದ ವೆಂಕಟನಬೋವಿ ರವರ ಹೆಸರಿನಲ್ಲಿದೆ. ದಾವಾ ಆಸ್ತಿಯ ಸರ್ವೆ ನಂ. 54/5 ಆಗಿದ್ದು ಅದು

ಕುದುಮಲಕುಂಟೆ ಗ್ರಾಮದಲ್ಲಿರುತ್ತದೆ. ನನ್ನ ತಾತ ನಡೆಸಿದ ಮೌಖಿಕ ವಿಭಾಗದ ಮೂಲಕ ದಾವಾ ಆಸ್ತಿಯು ನನ್ನ ತಂದೆಯ ಪಾಲಿಗೆ ಬಂದಿರುತ್ತದೆ. ಸದರಿ ಮೌಖಿಕ ವಿಭಾಗದ ವಿಚಾರವನ್ನು ನಿಮಗೆ ಯಾರು ತಿಳಿಸಿದರು ಎಂಬ ಪ್ರಶ್ನೆಗೆ ಸಾಕ್ಷಿ ಮೊದಲು ತಿಳಿಸಿಲ್ಲ ಎಂದು ಹೇಳಿ ನಂತರ ನಾವು ಚಿಕ್ಕ ಬಾಲಕಿಯರಾಗಿದ್ದಾಗ ದಾವಾ ಆಸ್ತಿಯಲ್ಲಿ ನಮ್ಮ ತಂದೆಯವರು ವ್ಯವಸಾಯ ಮಾಡುವುದನ್ನು ನೋಡಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನನ್ನ ತಂದೆಯವರು ಬೆಳೆಯನ್ನು ಇಡುತ್ತಿದ್ದರು ಎಂದು ತೋರಿಸಲು ಪಹಣಿಗಳು ಹಾಗೂ ಪಟ್ಟಾವನ್ನು ಹಾಜರುಪಡಿಸಿದ್ದೇನೆ.

ನನ್ನ ತಾತ ತೀರಿಕೊಂಡ ನಂತರ ದಾವಾ ಆಸ್ತಿಯ ಖಾತೆಯನ್ನು ತಮ್ಮ ಹೆಸರಿಗೆ ಬದಲಾಯಿಸಿಕೊಳ್ಳಲು ನನ್ನ ತಂದೆಯವರು ಪ್ರಯತ್ನಿಸಿರುವುದಿಲ್ಲ. ನಾನು ಮತ್ತು ಅಶ್ವತ್ಥಪ್ಪ ರವರು ದಾವಾ ಆಸ್ತಿಯ ಖಾತೆಯನ್ನು ನಮ್ಮ ಹೆಸರಿಗೆ ಮಾಡಿಸಿಕೊಳ್ಳಲು ಪ್ರಯತ್ನಿಸಿರುವುದಿಲ್ಲ. ವಂಶವೃಕ್ಷವನ್ನು ಕೋರಿ ಪ್ರತಿವಾದಿಯು ನಾಡಕಛೇರಿಗೆ ಸಲ್ಲಿಸಿದ್ದ ಅರ್ಜಿಯು ವಜಾಗೊಂಡಿರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಸದರಿ ಅರ್ಜಿಯನ್ನು ಯಾವ ಆಧಾರದ ಮೇಲೆ ವಜಾ ಮಾಡಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ನಾವೆ ನಿಜವಾದ ವಾರಸುದಾರಳಾದ ಕಾರಣ ಸದರಿ ಅರ್ಜಿಯನ್ನು ವಜಾ ಮಾಡಲಾಗಿದೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ದಾವೆಗೆ ಸಂಬಂಧಪಟ್ಟಂತೆ ಮತ್ತೊಂದು Issue ವನ್ನು ರೂಪಿಸಬೇಕಾದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು